ಮಾನವಸಂಪನ್ಮೂಲವಿಭಾಗ/मानव संसाधन अनुभाग/**HUMAN RESOURCES SECTION**
ಭಾರತೀಯವಿಜ್ಞಾನಸಂಸ್ಥೆ/भारतीय विज्ञान संस्थान/**INDIAN INSTITUTE OF SCIENCE**
ಬೆಂಗಳೂರು/बेंगलूर/ **BANGALORE – 560012**
ದೂರವಾಣಿ/दूरभाष/ **TELEPHONE : 2293 2493**
ಇ-ಮೇಲ್/**E-mail**/ईमेल : recruitment.council@iisc.ac.in

**ಜಾಹೀರಾತು ಸಂಖ್ಯೆ ಆರ್ (ಎಚ್ ಆರ್) 308-2022 ದಿನಾಂಕ 29 ಅಕ್ಟೋಬರ್ 2022**

ಭಾರತೀಯ ವಿಜ್ಞಾನ ಸಂಸ್ಥೆಯು ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗಾಗಿ ಪ್ರಮುಖ ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಯಾಗಿದೆ. ಭಾರತ ಸರ್ಕಾರದಿಂದ ಧನಸಹಾಯ ಪಡೆಯುವ ಈ ಸಂಸ್ಥೆ ರಾಷ್ಟ್ರಕ್ಕೆ ಪ್ರಮುಖ ಕೊಡುಗೆಗಳನ್ನು ನೀಡುವಲ್ಲಿ ಒಂದು ಶತಮಾನ ಪೂರೈಸಿದೆ. ಸಂಸ್ಥೆಯ ಜೆ ಆರ್ ಡಿ ಟಾಟಾ ಸ್ಮಾರಕ ಗ್ರಂಥಾಲಯವು ಸಂಸ್ಥೆಯಲ್ಲಿ ಪ್ರಾರಂಭವಾದ ಮೊದಲ ಮೂರು ವಿಭಾಗಗಳಲ್ಲಿ ಒಂದಾಗಿದೆ. ಇದು ಭಾರತದ ಅತ್ಯುತ್ತಮ ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಾಲಯಗಳಲ್ಲಿ ಒಂದು ಎನಿಸಿದೆ. ಮುಖ್ಯ ಗ್ರಂಥಾಲಯದ ಹೊರತಾಗಿ, ಸಂಸ್ಥೆಯು ವಿಭಾಗೀಯ ಗ್ರಂಥಾಲಯಗಳನ್ನು ಹೊಂದಿದೆ. ಸಂಸ್ಥೆಯ ಪ್ರಸ್ತುತ ಮತ್ತು ನಿರೀಕ್ಷಿತ ಶೈಕ್ಷಣಿಕ ಹಾಗೂ ಸಂಶೋಧನಾ ಕಾರ್ಯಗಳಿಗೆ ಅನುಗುಣವಾಗಿ ಭೌತಿಕ ಮತ್ತು ಎಲೆಕ್ಟ್ರಾನಿಕ್ ರೂಪದಲ್ಲಿ ಮಾಹಿತಿ ಒದಗಿಸುವ ಮೂಲಕ ಸಂಸ್ಥೆಯ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಬೆಂಬಲಿಸುವುದು ಗ್ರಂಥಾಲಯದ ಪ್ರಾಥಮಿಕ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ, ಸಂಸ್ಥೆಯು ಗ್ರಂಥಪಾಲಕ (ಲೈಬ್ರೇರಿಯನ್) ಹುದ್ದೆಗೆ ಭಾರತ ಸರ್ಕಾರದ ಪ್ರಮಾಣಿತ ನಿಯಮಗಳು ಮತ್ತು ಷರತ್ತುಗಳ ಅನ್ವಯ ನೇರ ನೇಮಕಾತಿ ಅಥವಾ ಇತರೆ ಇಲಾಖೆಗಳಿಂದ (ಫಾರಿನ್) ಸೇವಾ ಆಧಾರದ ಮೇಲೆ ನಿಯೋಜನೆಯ ಮೇಲೆ ಭರ್ತಿ ಮಾಡಲು ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಘಟಕ | ಹುದ್ದೆಗಳ ಒಟ್ಟು ಸಂಖ್ಯೆ | ವಯೋಮಿತಿ (ಜಾಹೀರಾತಿನ ಕೊನೆಯ ದಿನಾಂಕಕ್ಕೆ ಅನ್ವಯಿಸುವಂತೆ) | ವೇತನ |
|---|---|---|---|---|---|
| 1. 1 | ಲೈಬ್ರರಿಯನ್ (ಗ್ರಂಥಪಾಲಕ) | ಜೆ ಆರ್ ಡಿ ಸ್ಮಾರಕ ಟಾಟಾ ಗ್ರಂಥಾಲಯ | 01 (ಸಾಮಾನ್ಯ) | 55 ವರ್ಷ | 7ನೇ ಸಿಪಿಸಿಯಲ್ಲಿ ಹಂತ-14 (ರೂ. 1,44,200- ರೂ. 2,18,200) |

## ನಿಗದಿತ ಕನಿಷ್ಠ ವಿದ್ಯಾರ್ಹತೆ / ಅನುಭವ:

**ವಿದ್ಯಾರ್ಹತೆ:** ಸ್ಥಿರ ಉತ್ತಮ ಶೈಕ್ಷಣಿಕ ದಾಖಲೆಯೊಂದಿಗೆ ಕನಿಷ್ಠ 55% ಅಂಕಗಳು ಅಥವಾ ಅದರ ಸಮಾನ ದರ್ಜೆಯೊಂದಿಗೆ ಗ್ರಂಥಾಲಯ ವಿಜ್ಞಾನ/ ಮಾಹಿತಿ ವಿಜ್ಞಾನ/ದಾಖಲೀಕರಣದಲ್ಲಿ ಸ್ನಾತಕೋತ್ತರ ಪದವಿ.

**ಅನುಭವ:** ಸರ್ಕಾರಿ/ಅರೆ-ಸರ್ಕಾರಿ/ಸಾರ್ವಜನಿಕ ವಲಯ-ಪಿಎಸ್‌ಯು/ವಿಶ್ವವಿದ್ಯಾಲಯ/ರಾಷ್ಟ್ರೀಯ ಪ್ರಾಮುಖ್ಯತೆಯ ಶಿಕ್ಷಣ ಸಂಸ್ಥೆ/ಸಂಶೋಧನೆ ಮತ್ತು ಅಭಿವೃದ್ಧಿ- ಆರ್ & ಡಿ ಗಳಲ್ಲಿ ಗ್ರಂಥಾಲಯ ವಿಭಾಗದಲ್ಲಿ ಕನಿಷ್ಠ 15 ವರ್ಷಗಳ ಲೈಬ್ರರಿಯನ್ ಅನುಭವ; ಇದರಲ್ಲಿ ಕನಿಷ್ಠ 8 ವರ್ಷಗಳು ಡೆಪ್ಯುಟಿ ಲೈಬ್ರರಿಯನ್ ಅಥವಾ ತತ್ಸಮಾನ ದರ್ಜೆಯಲ್ಲಿ ರೂ. . 9000/-. ಗ್ರೇಡ್ ಪೇ ಜೊತೆಗೆ ಸೇವೆ ಸಲ್ಲಿಸಿರಬೇಕು. ನವೀನ ಗ್ರಂಥಾಲಯ ಸೇವೆ ಮತ್ತು ಪ್ರಕಟಿತ ಕೃತಿಗಳ ಸಂಘಟನೆ ಮತ್ತು ಗ್ರಂಥಾಲಯದ ICT ಆಧುನೀಕರಣ ಕುರಿತು ಸಾಕ್ಷ್ಯಗಳಿರಬೇಕು.

**ಅಪೇಕ್ಷಣೀಯ:** ಗ್ರಂಥಾಲಯ ವಿಜ್ಞಾನ/ಮಾಹಿತಿ ವಿಜ್ಞಾನ/ ದಾಖಲೀಕರಣ/ಪತ್ರಾಗಾರ ಮತ್ತು ಹಸ್ತಪ್ರತಿ ನಿರ್ವಹಣೆಯಲ್ಲಿ ಎಂ ಫಿಲ್/ಪಿಎಚ್‌ಡಿ ಪದವಿ. ಮಾಹಿತಿ ಸಂಗ್ರಹಣೆ, ಪ್ರಸರಣ ಮತ್ತು ನೆಟ್‌ವರ್ಕ್ ಸೇರಿದಂತೆ ಆಧುನಿಕ ತಂತ್ರಜ್ಞಾನ ಮತ್ತು ಅಭ್ಯಾಸಗಳೊಂದಿಗೆ ಅನುಭವ. ಭವಿಷ್ಯದ ಗ್ರಂಥಾಲಯಗಳು ರೂಪುಗೊಳ್ಳಲಿರುವ ಬಗ್ಗೆ ಪರಿಚಯ ಇರಬೇಕು.

ಕೇಂದ್ರ/ರಾಜ್ಯ ಸರ್ಕಾರಗಳು ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ ಅಥವಾ ವಿಶ್ವವಿದ್ಯಾನಿಲಯಗಳು/ವಿಶ್ವವಿದ್ಯಾನಿಲಯ ಮಟ್ಟದ ಸಂಸ್ಥೆ ಅಥವಾ ಸಾರ್ವಜನಿಕ ವಲಯದ ಸಂಸ್ಥೆಯ ಹುದ್ದೆಯನ್ನು ಹೊಂದಿರುವ ಮತ್ತು/ಅಥವಾ ನೇರ ನೇಮಕಾತಿಗಾಗಿ ಸೂಚಿಸಿದಂತೆ ಶೈಕ್ಷಣಿಕ ಅರ್ಹತೆ ಮತ್ತು ಅನುಭವವನ್ನು ಹೊಂದಿರುವ ಅಧಿಕಾರಿಗಳಿಂದ ಪ್ರಭಾರ/ನಿಯೋಜನೆಯನ್ನು ಪರಿಗಣಿಸಬಹುದು.

**ಉದ್ಯೋಗ ವಿವರ:** ಗ್ರಂಥಪಾಲಕರು ಗ್ರಂಥಾಲಯದ ಉಸ್ತುವಾರಿ ಜವಾಬ್ದಾರಿಯ ಜತೆಗೆ, ಸೆನೆಟ್ ಸದಸ್ಯರಾಗಿ, ಶೈಕ್ಷಣಿಕ ಸಿಬ್ಬಂದಿಯೊಂದಿಗೆ ಸಕ್ರಿಯವಾಗಿ ಸಮಾಲೋಚನೆ ನಡೆಸುವುದು ಹಾಗೂ ಸಂಸ್ಥೆಯ ಸಂಶೋಧನಾ ವಿದ್ವಾಂಸರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಂಥಾಲಯದ ಸೌಲಭ್ಯಗಳ ಗರಿಷ್ಠ ಬಳಕೆಯನ್ನು ಯೋಜಿಸುವುದನ್ನು ನಿರೀಕ್ಷಿಸಲಾಗಿದೆ.
ಇತರ ಕರ್ತವ್ಯಗಳೆಂದರೆ: ಗ್ರಂಥಾಲಯ ಆಡಳಿತ ಮತ್ತು ನಿರ್ವಹಣೆ, ಸಿಬ್ಬಂದಿ ವಿಷಯಗಳು, ಗ್ರಂಥಾಲಯ ಬಜೆಟ್, ತಾಂತ್ರಿಕ ಸೇವೆಗಳು, ನೆಟ್ ವರ್ಕ್ ಆಧಾರಿತ ಮಾಹಿತಿ ಸೇವೆಗಳ ಅಭಿವೃದ್ಧಿ, ಸರ್ಚ್ ಸೇವೆಗಳು ಮತ್ತು ಅಂತರರಾಷ್ಟ್ರೀಯ ವಲಯದಲ್ಲಿನ ಬೆಳವಣಿಗೆಗಳಿಗೆ ಅನುಗುಣವಾಗಿ ಗ್ರಂಥಾಲಯ ಸೇವೆಗಳನ್ನು ಸುಧಾರಿಸಲು ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸುವುದು. ಜೆ ಆರ್ ಡಿ ಟಾಟಾ ಮೆಮೋರಿಯಲ್ ಲೈಬ್ರರಿಯ ಪ್ರತಿಷ್ಠಿತ ಸ್ಥಾನಮಾನವನ್ನು ಉಳಿಸಿಕೊಳ್ಳಲು ಮತ್ತು ಸುಧಾರಿಸಲು ನೆಟ್‌ವರ್ಕ್ ಸಹಯೋಗ ಮತ್ತು ಹೊಸ ನವೀನ ಕಾರ್ಯವಿಧಾನಗಳನ್ನು ಸಹ ಅಭಿವೃದ್ಧಿಪಡಿಸಬೇಕು.

**ನೇಮಕಾತಿಯ ಅವಧಿ:**

ನೇರ ನೇಮಕಾತಿ (ಅಥವಾ) 5 ವರ್ಷಗಳವರೆಗೆ ಅಥವಾ 62 ವರ್ಷ ವಯಸ್ಸನ್ನು ತಲುಪುವವರೆಗೆ (ಯಾವುದು ಮೊದಲೋ ಅದು) ಪ್ರಭಾರ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ. ಅಥವ ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ಭಾರತ ಸರ್ಕಾರ ಹೊರಡಿಸಿದ ಆದೇಶಗಳ ಅನ್ವಯ.

## ನಿಯಮಗಳು ಮತ್ತು ಷರತ್ತುಗಳು:

1. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು. ನಿಗದಿತ ವಿದ್ಯಾರ್ಹತೆಗಳು ಮತ್ತು ಅನುಭವವು ಕನಿಷ್ಟ ಅವಶ್ಯಕವಾಗಿದ್ದು ಅಭ್ಯರ್ಥಿಯು ಅದನ್ನು ಹೊಂದಿದ್ದ ಮಾತ್ರಕ್ಕೆ ಅವನನ್ನು/ಅವಳನ್ನು ಸಂದರ್ಶನಕ್ಕೆ ಕರೆಯಲು ಅರ್ಹತೆ ಎಂದಲ್ಲ. ಅರ್ಹತೆಗಳು ಮತ್ತು/ಅಥವಾ ಕನಿಷ್ಠ ನಿಗದಿತ ಅನುಭವದ ಆಧಾರದ ಮೇಲೆ ಸಂದರ್ಶನಕ್ಕೆ ಪ್ರವೇಶ ಪಡೆದ ಅಭ್ಯರ್ಥಿಗಳ ಸಂಖ್ಯೆಯನ್ನು ಸಮಂಜಸವಾದ ಸಂಖ್ಯೆಗೆ ನಿರ್ಬಂಧಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ.
2. ವಯಸ್ಸಿನ ಮಿತಿ ಸಡಿಲಿಕೆಯು ಭಾರತ ಸರ್ಕಾರದ ನಿಯಮಗಳ ಪ್ರಕಾರ ಸಂಸ್ಥೆಗೆ ಅನುಗುಣವಾಗುವಂತೆ ಅನ್ವಯವಾಗಲಿವೆ. ಗರಿಷ್ಠ ವಯೋಮಿತಿ (ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ) ಸಡಿಲಿಕೆಯು ಈ ಹುದ್ದೆಗೆ 57 ವರ್ಷ ಆಗಿದೆ.

3. ನೇರ ನೇಮಕಾತಿಗೆ ಪ್ರೊಬೇಷನ್ ಅವಧಿ ಎರಡು ವರ್ಷಗಳು; ಹಾಗೂ ಗುತ್ತಿಗೆ ನೇಮಕಾತಿಗೆ ಪ್ರೊಬೇಷನ್ ಅವಧಿ ಒಂದು ವರ್ಷ.
4. ಹುದ್ದೆಯು ದೈಹಿಕ ದಿವ್ಯಾಂಗ ಅಭ್ಯರ್ಥಿಗಳಿಗೂ ಸೂಕ್ತವಾಗಿದೆ. ಆರ್ಥೋಪೆಡಿಕಲಿ ಹ್ಯಾಂಡಿಕ್ಯಾಪ್ಡ್/ಲೊಕೊಮೊಟರ್ ಅಸಾಮರ್ಥ್ಯ/ಸೆರೆಬ್ರಲ್ ಪಾಲ್ಸಿ ಜೊತೆಗೆ ಒಂದು ಕಾಲು ಬಾಧಿತ (ಬಲ ಅಥವಾ ಎಡ) (ಒಎಲ್) ಅಥವಾ ಒಂದು ತೋಳು ಬಾಧಿತ (ಬಲ ಅಥವಾ ಎಡ) (ಒಎ) ಅಥವಾ ಒಂದು ಕಾಲು/ಒಂದು ತೋಳು ಬಾಧಿತ (ಬಲ ಅಥವಾ ಎಡ), ಮಂದ ದೃಷ್ಟಿ (ಎಲ್ ವಿ) ಮತ್ತು ಶ್ರವಣದೋಷವುಳ್ಳವರು.
**5.** ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಯಾವುದೇ ವಿಷಯದಲ್ಲಿ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಭೌತಿಕ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
**6.** ಹುದ್ದೆಗೆ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಆದಾಗ್ಯೂ, ಅಗತ್ಯವೆಂದು ಕಂಡುಬಂದಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ.
7. ಎಲ್ಲಾ ಅಭ್ಯರ್ಥಿಗಳು ತಮ್ಮ ಹಾಲಿ ಉದ್ಯೋಗದಾತರಿಂದ (ಅನ್ವಯವಾಗುವಲ್ಲೆಲ್ಲಾ) ನಿರಾಕ್ಷೇಪಣಾ ಪ್ರಮಾಣಪತ್ರ -ಎನ್ ಒ ಸಿ ಪಡೆದುಕೊಳ್ಳಬೇಕು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಆದಾಗ್ಯೂ, ಅಭ್ಯರ್ಥಿಯು ಸಂದರ್ಶನದ ಸಮಯದಲ್ಲಿ ಎನ್‌ಒಸಿ ಸಲ್ಲಿಸುವುದಾಗಿ ಸಮರ್ಪಕವಾಗಿ ಸಹಿ ಮಾಡಿದ ಒಪ್ಪಂದವನ್ನು ಅಪ್‌ಲೋಡ್ ಮಾಡಿದರೆ ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.
8. ಕೊನೆಯ ದಿನಾಂಕದವರೆಗೆ ಕಾಯದೆ, ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಲು ಅರ್ಜಿದಾರರನ್ನು ಕೋರಲಾಗಿದೆ.
**9.** ಅಂತಿಮ ಆಯ್ಕೆ ಪಟ್ಟಿಯ (ಶಾರ್ಟ್ ಲಿಸ್ಟೆಡ್) ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಕರೆ ಪತ್ರಗಳನ್ನು ಮೇಲ್ ಮೂಲಕ ಕಳುಹಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನೋಂದಾಯಿತ ಇ-ಮೇಲ್ ಐಡಿಯನ್ನು ಆಗಾಗ್ಗೆ ಪರಿಶೀಲಿಸುವಂತೆ ಕೋರಲಾಗಿದೆ. ಶಾರ್ಟ್‌ಲಿಸ್ಟ್ ಮಾಡದ/ಸಂದರ್ಶನಕ್ಕೆ ಕರೆಯದ ಅರ್ಜಿದಾರರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.
10. ಯಾವುದೇ ಕಾರಣವನ್ನು ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ. ಯಾವುದೇ ಮಧ್ಯಂತರ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ. ಯಾವುದೇ ಕಾರಣವನ್ನು ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ. ಯಾವುದೇ ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹೀರಾತು/ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.
11. ಆನ್‌ಲೈನ್ ಅಥವಾ ವೈಯಕ್ತಿಕವಾಗಿ ಸಂದರ್ಶನವನ್ನು ನಡೆಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ. ಸಂದರ್ಶನಕ್ಕೆ ಕರೆಯಲಾಗುವ ದೂರ ಪ್ರದೇಶದ (ಔಟ್ ಸ್ಟೇಷನ್) ಅಭ್ಯರ್ಥಿಗಳು ತಮ್ಮ ಪ್ರಯಾಣ ಟಿಕೆಟ್ ಸಲ್ಲಿಕೆ ಮಾಡಿದಲ್ಲಿ ಕರ್ತವ್ಯದ ಸ್ಥಳ/ನಿವಾಸದಿಂದ ಬೆಂಗಳೂರಿಗೆ ಹಾಗೂ ವಾಪಸಾತಿ ಪ್ರಯಾಣದ ಅತಿ ಕಡಿಮೆ ದೂರದ ರೈಲ್ವೆ ಶುಲ್ಕ ದರವನ್ನು (2ನೇ ಎಸಿ) ಪಾವತಿಸಲಾಗುತ್ತದೆ.
**12.** ಸಂಸ್ಥೆಯ ಸೇವೆಗೆ 01.ಜನವರಿ 2004 ರ ಅಥವಾ ನಂತರ ನೇಮಕಗೊಂಡ ಎಲ್ಲಾ ಉದ್ಯೋಗಿಗಳು ಹೊಸ ಪಿಂಚಣಿ ಯೋಜನೆ (ಎನ್ ಪಿ ಎಸ್) ವ್ಯಾಪ್ತಿಗೆ ಬರುತ್ತಾರೆ. 31-12-2003ಕ್ಕೆ ಮುಂಚಿತವಾಗಿ ಸೇರ್ಪಡೆಯಾದ ಸಿಬ್ಬಂದಿಯು 1972ರ ಸಿಸಿಎಸ್ (ಪಿಂಚಣಿ) ನಿಯಮಾವಳಿ ಅನ್ವಯ ಭಾರತ ಸರ್ಕಾರ ಸೂಚಿಸಿರುವ ಜಿಪಿಎಫ್ ಪಿಂಚಣಿ ಮತ್ತು ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.
**13.** ಅಭ್ಯರ್ಥಿಯು ಸಲ್ಲಿಸಿದ ಪೂರ್ವಮಾಹಿತಿ ಮತ್ತು ದಾಖಲೆಗಳನ್ನು ಸೇವೆಯ ಯಾವುದೇ ಅವಧಿಯಲ್ಲಿ ಪರಿಶೀಲಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅಭ್ಯರ್ಥಿಯು ಸಲ್ಲಿಸಿದ ದಾಖಲೆಗಳು ಅಸಲಿ ಅಲ್ಲ ಎಂದು ಕಂಡುಬಂದಲ್ಲಿ,

ನಂತರದ ಪ್ರಕ್ರಿಯೆಯ ನಂತರ ಸೇವೆಗಳನ್ನು ಕೊನೆಗೊಳಿಸಲಾಗುತ್ತದೆ ಮತ್ತು ನೇಮಕಾತಿಯ ನಂತರವೂ ಅಂತಹ ಅಭ್ಯರ್ಥಿಗಳ ವಿರುದ್ಧ ಶಿಸ್ತುಕ್ರಮ/ಕ್ರಿಮಿನಲ್ ಮೊಕದ್ದಮೆಗಳನ್ನು ಪ್ರಾರಂಭಿಸಲಾಗುತ್ತದೆ.

14. ಪದವಿ/ಸ್ನಾತಕೋತ್ತರಕ್ಕೆ ಸಂಬಂಧಿಸಿದಂತೆ ಸಿಜಿಪಿಎ/ಜಿಪಿಎ ವ್ಯವಸ್ಥೆಯ ಅಡಿಯಲ್ಲಿ ಪದವಿಗಳನ್ನು ಪಡೆದ ಅಭ್ಯರ್ಥಿಗಳು ಸಿಜಿಪಿಎ/ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಲು ವಿಶ್ವವಿದ್ಯಾಲಯ/ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ಸಲ್ಲಿಸಬೇಕಿರುತ್ತದೆ. ದಾಖಲೆಗಳ ಪರಿಶೀಲನೆಯ ವೇಳೆ ಅದರ ಪುರಾವೆಯನ್ನು (ವಿಶ್ವವಿದ್ಯಾಲಯ/ಸಂಸ್ಥೆಯಿಂದ ನೀಡಲಾದ ಪತ್ರ) ಸಲ್ಲಿಸಬೇಕಿರುತ್ತದೆ.
15. ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿ ಪೋರ್ಟಲ್ 29/10/2022 ರಿಂದ 18/11/2022 ರವರೆಗೆ ತೆರೆದಿರುತ್ತದೆ.

ಆಸಕ್ತರು ಸಂಸ್ಥೆಯ ಜಾಲತಾಣ: http://recruitment.iisc.ac.in/NonTeaching/ ಇಲ್ಲಿಗೆ ಭೇಟಿ ನೀಡಿ ಪೂರಕ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ದಿನಾಂಕ 18/11/2022 ರೊಳಗೆ ಅಪ್ ಲೋಡ್ ಮಾಡಲು ಕೋರಲಾಗಿದೆ.

**ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಲಿಂಕ್:** **http://recruitment.iisc.ac.in/NonTeaching/**

**ಕುಲಸಚಿವರು**